'ಹೆಣ್‌ಮಕ್ಳೆ ಸ್ಟ್ರಾಂಗು ಗುರು' – ಯೋಗರಾಜ ಭಟ್‌ರ ಈ ಸಿನಿಮಾಗೀತೆಯ ಸಾಲು ಕನ್ನಡ ಚಿತ್ರರಂಗದ ವರ್ತಮಾನಕ್ಕೂ ಅನ್ವಯಿಸುವಂತಿದೆ. ಗಾಂಧಿನಗರದ ಇಂದಿನ ಸ್ಥಿತಿ ನೋಡಿ: ಒಂದೆಡೆ ತಾರಾವರ್ಚಸ್ಸಿನ ನಟರು ಸೋಲಿನ ಸರಪಳಿ ಕಳಚಿಕೊಂಡು ಮತ್ತೆ ಗೆಲುವಿನ ಕುದುರೆಯೇರಿದ್ದಾರೆ. ಇನ್ನೊಂದೆಡೆ ತರುಣ ನಿರ್ದೇಶಕರು ತಮ್ಮ ಭಿನ್ನದನಿಯ ಮೂಲಕ ಚಿತ್ರರಸಿಕರ ಗಮನ ಸೆಳೆಯುತ್ತಿದ್ದಾರೆ. ಸಿನಿಮಾಚೈತ್ರದ ಹೊಳಪಿಗೆ ಮತ್ತೊಂದು ಪ್ರಮುಖ ಕಾರಣವೂ ಇದೆ. ಅದು, ಕನ್ನಡ ಚಿತ್ರರಂಗ ಮತ್ತೆ ಮಹಿಳೆಯರಿಗೆ ಹತ್ತಿರವಾಗಿರುವುದು!

ಕನ್ನಡ ಚಿತ್ರರಂಗದ ಈ ಹೊತ್ತಿನ ಮಹಿಳಾ ಸಖ್ಯವನ್ನು ಮೂರು ರೀತಿಯಲ್ಲಿ ಗುರ್ತಿಸಬಹುದು. ಮೊದಲನೆಯದು: ಕನ್ನಡ ಸಂವೇದನೆಯ ಪ್ರತಿಭಾವಂತ ಯುವನಟಿಯರ ಸಂಖ್ಯೆ ಹೆಚ್ಚಿರುವುದು. ಇನ್ನೊಂದು, ಮಹಿಳಾ ಕಥನಗಳ ಸಂಖ್ಯೆ ಸಿನಿಮಾಗಳಲ್ಲಿ ಹೆಚ್ಚುತ್ತಿರುವುದು. ಮೂರನೆಯದು, ಮಹಿಳಾ ಪ್ರೇಕ್ಷಕರು ಮತ್ತೆ ಚಿತ್ರಮಂದಿರಗಳತ್ತ ಮುಖ ಹಾಕುತ್ತಿರುವುದು. ಹೀಗೆ, ಮೂರು ರೂಪದಲ್ಲಿ 'ಸ್ತ್ರೀ ಅಂತಃಕರಣ' ಕನ್ನಡ ಚಿತ್ರರಂಗವನ್ನು ಪೊರೆಯುತ್ತಿರುವುದು ಒಂದು ವಿಶೇಷ ವಿದ್ಯಮಾನವೇ ಹೌದು.

### ಆ ದಿನಗಳು...

ಒಂದು ಕಾಲವಿತ್ತು. ರತಿ ವರ್ಚಸ್ಸಿಗೆ ಜಯಂತಿ, ದಂತದ ಗೊಂಬೆಯಂಥ ಪಾತ್ರಗಳಿಗೆ ಭಾರತಿ, ಹುಡುಗಾಟದ ಹುಡುಗಿಯ ಕಥನಗಳಿಗೆ ಮಂಜುಳಾ, ಭಾವಕೋಶಕ್ಕೆ ಲಗ್ಗೆ ಇಡಲು ಕಲ್ಪನಾ–ಆರತಿ ಹಾಗೂ ಲೀಲಾವತಿ, ಸಂಕೀರ್ಣ ಪಾತ್ರಗಳಿಗೆ ಬಿ. ಸರೋಜಾದೇವಿ – ಹೀಗೆ ಒಂದೊಂದು ಭಾವಕ್ಕೆ ಒಬ್ಬೊಬ್ಬ ನಟಿ ಹೆಸರುಗಳಿಸಿದ್ದ ದಿನಗಳವು. ಅಮ್ಮಂದಿರ ಪಾತ್ರಗಳಲ್ಲಿ ಎಂ.ವಿ. ರಾಜಮ್ಮ, ಪಂಢರಿಬಾಯಿ ಅವರನ್ನು ಮೀರುವವರುಂಟೆ? 'ಮಿಸ್ ಲೀಲಾವತಿ', 'ಬೆಟ್ಟದ ಹುಲಿ', 'ಎಡಕಲ್ಲು ಗುಡ್ಡದ ಮೇಲೆ', 'ಸಂಪತ್ತಿಗೆ ಸವಾಲ್', 'ಶರಪಂಜರ', 'ಬೆಳ್ಳಿಮೋಡ', 'ಉಪಾಸನೆ', 'ರಂಗನಾಯಕಿ', 'ಕಿತ್ತೂರ ಚೆನ್ನಮ್ಮ', 'ಅಣ್ಣತಂಗಿ', 'ಸಿಪಾಯಿರಾಮು', 'ಭಕ್ತಕುಂಬಾರ', 'ರಾಣಿ ಹೊನ್ನಮ್ಮ' – ಇವೆಲ್ಲ ಕನ್ನಡ ನಾಯಕಿಯರ ಪ್ರತಿಭಾವಲಯವನ್ನು ಅನಾವರಣಗೊಳಿಸಿದ ಕೆಲವು ಸಿನಿಮಾಗಳು. ಪುಟ್ಟಣ್ಣ ಕಣಗಾಲರಂಥ ನಿರ್ದೇಶಕರು ನಾಯಕಿ ಕೇಂದ್ರಿತ ಸಿನಿಮಾಗಳನ್ನೇ ರೂಪಿಸಿ ಯಶಸ್ಸುಪಡೆದರು. ತಮ್ಮ ಸಿನಿಮಾಗಳ ಮೂಲಕ ಪುಟ್ಟಣ್ಣನವರು ಬಹು ದೊಡ್ಡ ಮಹಿಳಾಪ್ರೇಕ್ಷಕ ಪಡೆಯೊಂದನ್ನು ರೂಪಿಸಿದರು. ಎಪ್ಪತ್ತು ಎಂಬತ್ತರ ದಶಕದಲ್ಲಿ ಕನ್ನಡ ಚಿತ್ರರಂಗ ಸಾಹಿತ್ಯಕೃತಿಗಳ ಮೋಹಕ್ಕೆ ಬಿದ್ದಿತ್ತಲ್ಲ – ಆ ಸಂದರ್ಭದಲ್ಲಂತೂ ಕನ್ನಡದ ನಾಯಕಿಯರ ಜೊತೆಗೆ ಅಕ್ಕಪಕ್ಕದ ಭಾಷೆಗಳಿಂದಲೂ ಚೆಲುವೆಯರನ್ನೂ ಪ್ರತಿಭಾವಂತೆಯರನ್ನೂ ಆಮದು ಮಾಡಿಕೊಳ್ಳಬೇಕಾಯಿತು. ಲಕ್ಷ್ಮಿ, ಸರಿತಾ, ಮಾಧವಿ, ಗೀತಾ, ಅಂಬಿಕಾ, ಸುಮಲತಾ, ಮುಂತಾದವರು ಕನ್ನಡ ಚಿತ್ರರಂಗಕ್ಕೆ ಬಂದುದು ಹೀಗೆ.

ಸಿನಿಮಾ ಮಾಧ್ಯಮ ನಾಯಕ ಪ್ರಧಾನವಾಗಿ ರೂಪುಗೊಳ್ಳತೊಡಗಿದ ಹಾಗೆ ನಾಯಕಿಯರ ತಾರಾಮೌಲ್ಯವೂ ಕುಸಿಯತೊಡಗಿತು. ಆ ಕಾರಣದಿಂದಲೇ ಆರತಿ, ಭಾರತಿಯರ ನಂತರದ ತಲೆಮಾರು ಅಷ್ಟೇನೂ ಪ್ರಭಾವಶಾಲಿಯಾಗಲಿಲ್ಲ. ನಾಯಕರ ಇಮೇಜ್‌ಗೆ ತಕ್ಕಂತೆ ನಿರ್ದೇಶಕರು ಕಥೆಗಳನ್ನು ರೂಪಿಸತೊಡಗಿದ್ದುದರಿಂದ ನಾಯಕಿಯರ ಪಾತ್ರಗಳು ಸೊರಗತೊಡಗಿದವು. ಸಿನಿಮಾದ ಗ್ಲಾಮರ್ ಅಗತ್ಯದ ರೂಪದಲ್ಲಿ ನಾಯಕಿಯರನ್ನು ಪರಿಗಣಿಸುವ ಪರಿಪಾಠ ಶುರುವಾಯಿತು. ಸಾಹಿತ್ಯ ಕೃತಿಗಳ ಅವಲಂಬನೆ ಕಡಿಮೆಯಾದುದು ಕೂಡ ಸಿನಿಮಾಗಳಲ್ಲಿ ಸ್ತ್ರೀಧ್ವನಿ ಸೊರಗಲಿಕ್ಕೊಂದು ಕಾರಣವಾಯಿತು.

ನಾಯಕಿಯರ ಪರಿಕಲ್ಪನೆಯಲ್ಲಿ ಉಂಟಾದ ಬದಲಾವಣೆ ಕಥನದ

